# ಸೈಬರ್ ವಾರ್ತಿಕ | Cyber Vartika

ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecK
Cyber Security Karnataka
K-Tech CoE for Cyber Security

## ಮಾರ್ಚ್ 2022 | March 2022

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ! https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

CySeck CoE

CySecK

@CySecKCoE

CySecK

CySecKCoE

CySecK

# ಮುನ್ನುಡಿ /Foreword

ಪ್ರಿಯ ಓದುಗರೇ,

ಸೈಬರ್ ವಂಚಕರು ಜನರಿಗೆ ಮೋಸ ಮಾಡಲು ಹೊಸ ರೀತಿಯ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಇಂಟರ್‌ನೆಟ್ ಮೂಲಕ ದುಡ್ಡು ಸಂಪಾದಿಸುವ ಅವರ ದಾರಿ ಇನ್ನಷ್ಟು ಲಾಭದಾಯಕವಾಗಿದೆ. ಆನ್‌ಲೈನ್‌ನಲ್ಲಿ ಹಣಕಾಸಿನ ಮಾಹಿತಿ ಹಂಚಿಕೊಳ್ಳುವಾಗ ತೆಗೆದುಕೊಳ್ಳಬೇಕಾದ ಜಾಗೃತಿ ದಿನೇ-ದಿನೇ ಕಡಿಮೆಯಾಗುತ್ತಿದ್ದು, ಏಟಿಎಂಗಳಲ್ಲಿ ಮಾಲ್‌ವೇರ್ ಅಟ್ಯಾಕ್‌ಗಳು, ಇತರ ಕಾನೂನು ವಿರೋಧಿ ಕೃತ್ಯಗಳ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿವೆ. ತಂತ್ರಜ್ಞಾನ ಬಳಸಿಕೊಳ್ಳುತ್ತಿರುವ ವಂಚಕರು, ಕ್ಷಣ ಮಾತ್ರದಲ್ಲಿ ಒಂದು ದಿಕ್ಕಿನಿಂದ, ಇನ್ನೊಂದು ದಿಕ್ಕಿಗೆ ಸುಲಭವಾಗಿ ಹೋಗುವಷ್ಟು ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ. ಈ ಕಾರಣಗಳಿಂದ, ಸೈಬರ್ ಅಪರಾಧಗಳ ತನಿಖೆಗಳು ಕೂಡ ಇನ್ನಷ್ಟು ಕಷ್ಟವಾಗುತ್ತಿವೆ. ಇಂಟರ್‌ನೆಟ್ ಸೌಲಭ್ಯವನ್ನು ಯಾವುದೇ ಗುರುತ್ತಿಲ್ಲದೆ ಬಳಸಬಹುದಾದ್ದರಿಂದ ಹಾಗೂ ಅಂತರಾಷ್ಟ್ರೀಯವಾಗಿ ಸರಿಯಾದ ಸಂಪರ್ಕ ಸಮನ್ವಯತೆ ಇಲ್ಲದಿರುವುದರಿಂದ, ಸೈಬರ್ ಕ್ರಿಮಿನಲ್‌ಗಳು ಆಡಿದ್ದೇ ಆಟವಾಗಿದೆ. ಅವರು ಲಾಭ ಗಳಿಸುವುದರಲ್ಲಿ ಮೇಲುಗೈ ಸಾಧಿಸಿದ್ದಾರೆ.

ನಾವು ಸೈಬರ್ ಅಪರಾಧಗಳನ್ನು ಮಟ್ಟ ಹಾಕುವುದರಲ್ಲಿ ಇನ್ನಷ್ಟು ಸುಧಾರಿಸಿಕೊಳ್ಳಬೇಕಾಗಿದೆ. ನನ್ನ ಪ್ರಕಾರ, ನಮ್ಮ ಜೊತೆ ಸರ್ಕಾರ, ಉದ್ಯಮ, ಶಿಕ್ಷಣ ಕ್ಷೇತ್ರ ಮತ್ತು ಸಮುದಾಯ-ಆಧಾರಿತ ಸಂಸ್ಥೆಗಳು ಸಹಭಾಗಿಗಳಾಗಿ ಕೈ ಜೋಡಿಸುವುದು ಅವಶ್ಯಕವಾಗಿದೆ. ಈ ಬೆಸುಗೆಯಿಂದ, ತಾಂತ್ರಿಕವಾಗಿ ಮತ್ತು ಇತರ ಅಗತ್ಯ ರೀತಿಗಳಲ್ಲಿ ಅಂತರ್ಜಾಲದಲ್ಲಿನ ವಂಚಕರನ್ನು ಎದುರಿಸುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ನಮ್ಮ ಪ್ರಯತ್ನಗಳೆಲ್ಲ ಸಂಶೋಧನೆ, ಅನ್ವೇಷಣೆ, ತಾಂತ್ರಿಕ ಸಾಧನಗಳ ಅಭಿವೃದ್ಧಿ ಮತ್ತು ಪ್ರಮುಖವಾಗಿ, ಮೇಲೆ ಹೇಳಿರುವ ಅಂಶಗಳನ್ನು ದೇಶದ ಕಾರ್ಯತಂತ್ರ ಮತ್ತು ವಹಿವಾಟುಗಳಿಗೆ ಹೇಗೆ ಹೊಂದಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ನಿಂತಿದೆ.

ಸೈಬರ್ ಅಪರಾಧಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವುದು ಪ್ರಮುಖ ಪಾತ್ರ ವಹಿಸುತ್ತದೆ. ಅದೇ ಕಾರಣಕ್ಕೆ, ಸೈಸೆಕ್ ಜನರಲ್ಲಿ ಮೂಡಿಸುತ್ತಿರುವ ಜಾಗೃತಿ ಮತ್ತು ತಿಳುವಳಿಕೆ ನೀಡುತ್ತಿರುವ ವಿಧಾನವನ್ನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ. ಈ ಆವೃತ್ತಿಯ ಸುದ್ದಿಪತ್ರ, ಸೈಬರ್ ಭದ್ರತೆಯ ಇತ್ತೀಚಿನ ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲಲಿದೆ. ಜಾಗೃತಿಗೆ ಸಂಬಂಧಿಸಿದ ಮಾಹಿತಿ ಭಿತ್ತಿಪತ್ರದಲ್ಲಿದ್ದು, ಪ್ರತಿ ಓದುಗರಿಗು ತುಂಬಾ ಇಷ್ಟವಾಗುತ್ತದೆ ಎಂದು ನಂಬಿದ್ದೇನೆ.

ವೆಂಕಟೇಶ್ ಮೂರ್ತಿ. ಕೆ
ನಿರ್ದೇಶಕರು
ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾ.

Dear Readers,

The world is witnessing cybercriminals improving their specialization and competence to make their voyages on the internet a profit-driven business. There is a spike in online marketplaces offering compromised financial information, malware for ATM attacks, weapons, banned or restricted items. Technology allows the criminal to hop from country to country in seconds, making the investigation difficult. The anonymous nature of the internet and lack of uniformity in international cooperation has given the criminals the upper hand and derive profits from their ventures.

We must improve the handling of cybercrimes, and I feel this is a shared responsibility with the partnership of Government, Industry, Academia & other community-based organizations. This unique partnership would improve technological and non-technological skills for responding to criminals in cyberspace.

Our efforts must be towards research, innovation, technology product development, and, most importantly, their commercialization in our country's strategic & commercial interests.

Educating the public is an essential component of Cybercrime prevention, and I must compliment CySecK for its efforts in promoting awareness and education. This edition of the newsletter covers the recent updates related to cyber security. I'm sure the awareness material in infographics would greatly interest the readers.

Venkatesh Murthy. K
Director
Data Security Council of India.



# ಪ್ರಮುಖ ಸೈಬರ್ ಸುದ್ದಿ

## ‘ಕಾಶ್ಮೀರ ಫೈಲ್ಸ್’ ಡೌನ್‌ಲೋಡ್ ಲಿಂಕ್‌ಗಳು, ನಿಮ್ಮ ದಾರಿ ತಪ್ಪಿಸುವ ಜೊತೆಗೆ ಬ್ಯಾಂಕ್ ಅಕೌಂಟ್ ಕೂಡ ಖಾಲಿ ಮಾಡಬಹುದು.

ವಿವೇಕ್ ಅಗ್ನಿಹೋತ್ರಿ ನಿರ್ದೇಶನದಲ್ಲಿ ಮೂಡಿಬಂದಿರುವ ಕಾಶ್ಮೀರಿ ಫೈಲ್ಸ್ ಹೆಸರಿನ ಚಿತ್ರ, ನೋಡುಗರನ್ನು ಮೋಡಿ ಮಾಡುತ್ತಿದೆ. ಅದರ ಮಧ್ಯದಲ್ಲೇ, ಆ ಚಿತ್ರದ ಡೌನ್‌ಲೋಡ್‌ಗೆ ಜನರನ್ನು ಪ್ರೇರೇಪಿಸಿ, ಅವರ ದಾರಿ ತಪ್ಪಿಸುತ್ತಿರುವ ಲಿಂಕ್‌ಗಳು ವಾಟ್ಸಪ್‌ನಲ್ಲಿ ಹರಿದಾಡುತ್ತಿವೆ. ಗೊತ್ತಿಲ್ಲದ ಕಡೆಯಿಂದ ಅಥವಾ ನಂಬರ್‌ನಿಂದ, ಸಾಮಾಜಿಕ ಜಾಲತಾಣ ಅಥವಾ ವಾಟ್ಸಪ್‌ನಲ್ಲಿ ಬರುವ ಅನುಮಾನಾಸ್ಪದ ಲಿಂಕ್‌ಗಳು ಸೈಬರ್ ವಂಚನೆಯ ಪ್ರಯತ್ನವಾಗಿರುವ ಸಾಧ್ಯತೆ ಇರುವುದರಿಂದ, ಅವುಗಳ ಮೇಲೆ ಕ್ಲಿಕ್ ಮಾಡಬಾರದು ಎಂದು ಪೊಲೀಸರು ಜನರನ್ನು ಎಚ್ಚರಿಸಿದ್ದಾರೆ. 1990 ರಲ್ಲಿ ಕಾಶ್ಮೀರದಲ್ಲಿ ದಂಗೆಯಾದಾಗ, ಅಲ್ಲಿಂದ ಹೊರಬಂದ ಕಾಶ್ಮೀರದ ಹಿಂದುಗಳ ಬಗ್ಗೆ ಕಥಾವಸ್ತು ಹೊಂದಿರುವ ಚಿತ್ರ ಕಾಶ್ಮೀರಿ ಫೈಲ್ಸ್. ಅದು ಮಾರ್ಚ್ 11ನೇ ತಾರೀಖಿನಂದು ತೆರೆಕಂಡಿದೆ.

ಸೈಬರ್ ವಂಚಕರು ಈ ರೀತಿ ಹೆಸರು ಮಾಡುತ್ತಿರುವ ಚಿತ್ರದ ಅಥವಾ ವಿಡಿಯೋದ ಲಿಂಕ್‌ಗಳನ್ನು ಜನರಿಗೆ ಕಳಿಸಿಕೊಟ್ಟು, ಫ್ರೀ ಆಕ್ಸೆಸ್ ನೀಡುತ್ತಾರೆ. ಆ ಮೂಲಕ, ಲಿಂಕ್ ಮೇಲೆ ಕ್ಲಿಕ್ ಮಾಡುವ ಜನರ ಫೋನ್‌ಗಳನ್ನು ಹ್ಯಾಕ್ ಮಾಡುವುದಲ್ಲದೇ, ಅವರ ಮೊಬೈಲ್ ಸಂಖ್ಯೆಗಳಿಗೆ ಲಿಂಕ್ ಆಗಿರುವ ಬ್ಯಾಂಕ್ ಅಕೌಂಟ್‌ಗಳನ್ನೂ ದೋಚುತ್ತಾರೆ.

## ಆರ್‌ಬಿಐ ವರದಿಯ ಪ್ರಕಾರ, 2021 ರಲ್ಲಿ ಡಿಜಿಟಲ್ ಸ್ವರೂಪದ ವ್ಯವಹಾರದ ವಹಿವಾಟುಗಳು 30% ಹೆಚ್ಚಾಗುವ ಜೊತೆಗೆ ಡಿಜಿಟಲ್ ವಿಧಾನದ ಮೋಸಗಳು ಕೂಡ ಹೆಚ್ಚಿವೆ.

ಮಾರ್ಚ್ 2022 ರಲ್ಲಿ ಹೊರಬಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸುದ್ದಿಪತ್ರ, ಭಾರತದಲ್ಲಿ ಡಿಜಿಟಲ್ ಸ್ವರೂಪದ ವ್ಯವಹಾರಗಳ ವಹಿವಾಟುಗಳು 30% ಹೆಚ್ಚಾಗುವ ಜೊತೆಗೆ, ಜಾಗತಿಕ ಬೆಳವಣಿಗೆ ದರಕ್ಕಿಂತ 760 ಬೇಸಿಸ್ ಪಾಯಿಂಟ್‌ಗಳಷ್ಟು ವೇಗದ ಅಭಿವೃದ್ಧಿ ಕಂಡಿದೆ. ಸರ್ವೆ ಪ್ರಕಾರ, ಇತರ ದೇಶಗಳಿಗೆ ಹೋಲಿಸಿದರೆ, ಭಾರತವು 2018 ರಿಂದ ಡಿಜಿಟಲ್ ವಹಿವಾಟುಗಳಲ್ಲಿ ತುಂಬಾ ಮುಂದಿದೆ. ಅದೇ ರೀತಿ, ಬೇಕಾದಷ್ಟು ಡಿಜಿಟಲ್ ಅಪರಾಧಗಳೂ ವರದಿಯಾಗಿವೆ.

ಆರ್‌ಬಿಐ ಮಾಹಿತಿಯ ಪ್ರಕಾರ, 2021 ರ ಏಪ್ರಿಲ್ ಮತ್ತು ಸೆಪ್ಟಂಬರ್ ನಡುವೆ, ಭಾರತೀಯ ಸಾಲದಾತರು 4,071 ವಂಚನೆಗಳನ್ನು ವರದಿ ಮಾಡಿದ್ದು, ಒಟ್ಟಾರೆ ರೂ. 36,342 ಕೋಟಿಯಷ್ಟು ಹಣ ವಂಚಿಸಲಾಗಿದೆ.

## ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವಿರುದ್ಧ ನಿಂದನೆ ಮಾಡುವಂತಹ ಪೋಸ್ಟ್ ಹಾಕಿದ್ದಕ್ಕೆ FIR ರಿಜಿಸ್ಟರ್ ಮಾಡಲಾಗಿದೆ.

ಹಿಜಾಬ್ ಅರ್ಜಿಯ ವಿಚಾರಣೆ ಮಾಡಿದ ತ್ರಿಸದಸ್ಯ ಪೀಠದ ಭಾಗವಾಗಿದ್ದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ನಿಂದನೆ ಮಾಡುವ ರೀತಿಯ ಪೋಸ್ಟ್ ಹಾಕಿದ್ದಕ್ಕೆ, ದಕ್ಷಿಣ ವಿಭಾಗದ ಸೈಬರ್ ಕ್ರೈಮ್ ಪೊಲೀಸರು, ಒಬ್ಬ ವ್ಯಕ್ತಿ ಮತ್ತು ‘ಮಂಗಳೂರು ಮುಸ್ಲಿಮ್ಸ್’ ಎಂಬ ಹೆಸರಿನ ಆನ್‌ಲೈನ್ ಪೇಜ್‌ನ ಅಡ್ಮಿನ್ ಮತ್ತು ಅದರ ಸದಸ್ಯರ ಮೇಲೆ, FIR ದಾಖಲಿಸಿದ್ದಾರೆ.

ದಯವಿಟ್ಟು ಗಮನಿಸಿ: ಸಾಮಾಜಿಕ ಜಾಲತಾಣದಲ್ಲಿ ಒಮ್ಮೆ ಕಂಟೆಂಟ್ ಅಪ್‌ಲೋಡ್ ಆದಮೇಲೆ, ಅದನ್ನು ಅಳಿಸದ ಹೊರತಾಗಿ, ಅದು ಅಲ್ಲಿಯೇ ಉಳಿಯುತ್ತದೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಅಥವಾ ಕಾಮೆಂಟ್‌ಗಳನ್ನು ಹಾಕುವ ಮುನ್ನ, ಜನರು ವಿಚಾರ ಮಾಡುವುದು ಮುಖ್ಯವಾಗುತ್ತದೆ. ನಿಂದನಾತ್ಮಕ ಪೋಸ್ಟ್ ಮಾಡುವುದು ಅವರನ್ನು ಜೈಲಿಗೆ ತಳ್ಳಬಹುದು.

## ಭಾರತದ ಆನ್‌ಲೈನ್ ಸೇಫ್ಟಿ ಸಂಪನ್ಮೂಲ ಅಥವಾ ರಿಸೋರ್ಸ್ ಆಗಿ ಸೇವೆ ನೀಡುವ ‘ಸೇಫ್ಟಿ ಇನ್ ಇಂಡಿಯಾ’ ಎಂಬ ಹೆಸರಿನ ವೇದಿಕೆಯನ್ನು ವಾಟ್ಸಪ್ ಪರಿಚಯಿಸಿದೆ.

ವಾಟ್ಸಪ್ ‘ಸೇಫ್ಟಿ ಇನ್ ಇಂಡಿಯಾ' ರಿಸೋರ್ಸ್ ವೇದಿಕೆಯನ್ನು ಜನರ ಆನ್‌ಲೈನ್ ಭದ್ರತೆಗೆ ನೆರವಾಗಲು ಹೆಚ್ಚಿನ ಸಂಖ್ಯೆಯ ಸುರಕ್ಷತೆ ಸಲಹೆಗಳೊಂದಿಗೆ ಪರಿಚಯಿಸಿದೆ.

ಈ ರಿಸೋರ್ಸ್ ಪೋರ್ಟಲ್ ಆನ್‌ಲೈನ್ ಭದ್ರತೆ, ಗೌಪ್ಯತೆ ಮತ್ತು ಸೆಕ್ಯುರಿಟಿಗೆ ಸಂಬಂಧಿಸಿದ ಹೆಚ್ಚಿನ ಅಗತ್ಯ ವಿಷಯಗಳ ಮೇಲೆ, ಜನರ ಸಾಮಾನ್ಯ ಮೂಢನಂಬಿಕೆಗಳನ್ನು ಮುರಿಯುವುದರ ಕಡೆಗೆ ಮತ್ತು ಇಂದಿನ ಡಿಜಿಟಲ್ ಪ್ರಪಂಚದಲ್ಲಿ ಇಂಟರ್‌ನೆಟ್ ಬಳಕೆದಾರರು ಸೈಬರ್ ವಂಚನೆಗಳಿಂದ ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ಅರಿವನ್ನು ಮೂಡಿಸುವುದರ ಕಡೆಗೆ ಗಮನ ಹರಿಸಿದೆ.

## 2022 ರಲ್ಲಿ 2.21 ಲಕ್ಷ ಸೈಬರ್ ಸೆಕ್ಯುರಿಟಿ ಪ್ರಕರಣಗಳು ವರದಿಯಾಗಿವೆ: ಭಾರತ ಸರ್ಕಾರ

ಭಾರತದ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ತಂಡ (CERT-In) 2.12 ಲಕ್ಷಗಳಿಗಿಂತಲೂ ಹೆಚ್ಚಿನ ಸೈಬರ್ ಸೆಕ್ಯುರಿಟಿ ಪ್ರಕರಣಗಳನ್ನು ಈ ವರ್ಷ (ಫೆಬ್ರವರಿ 2022 ರ ವರೆಗೆ) ವರದಿ ಮಾಡಿದೆ. ಹಿಂದಿನ ವರ್ಷದಲ್ಲಿ, CERT-In 14.02 ಲಕ್ಷಗಳಿಗಿಂತ ಹೆಚ್ಚಿನ ಸೈಬರ್ ಸೆಕ್ಯುರಿಟಿ ಸಂಬಂಧಿತ ಪ್ರಕರಣಗಳನ್ನು ವರದಿ ಮಾಡಿತ್ತು.

**ದಯವಿಟ್ಟು ಗಮನಿಸಿ- ನಿಮ್ಮ ವೈಯಕ್ತಿಕ ಮಾಹಿತಿಯನ್ನು ಕದಿಯಲು ವಂಚಕರು ಹೊಸ-ಹೊಸ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಈ ಹೊಸ ವಿಧಾನದ ಮೂಲಕ, ಹೊಸದಾಗಿ ಬಿಡುಗಡೆಯಾದ ಚಿತ್ರಗಳ ಡೌನ್‌ಲೋಡ್ ಲಿಂಕ್‌ಗಳ ಸೋಗಿನಲ್ಲಿ, ಜನರಿಗೆ ಮಾಲ್‌ವೇರ್‌ಗಳನ್ನು ಕಳುಹಿಸುತ್ತಿದ್ದಾರೆ. ಈ ರೀತಿಯ ವಾಟ್ಸಪ್ ಫಾರ್ವರ್ಡ್ ಮೆಸೇಜ್‌ಗಳು ಬಂದಾಗ, ಜಾಗೃತರಾಗಿರುವುದು ಬಹಳ ಮುಖ್ಯ. ಇಂತಹ ಸಂದೇಶಗಳಲ್ಲಿ ವಂಚಕರು ಮಾಡಿರುವ ತಪ್ಪುಗಳು ಎದ್ದು ಕಾಣುವುದರಿಂದ, ಸೂಕ್ಷ್ಮವಾಗಿ ಗಮನಿಸಿದರೆ, ಅವುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು.**



# Top Cyber News

## Fake 'Kashmir Files' download links will empty your bank account

The Kashmir Files, directed by Vivek Agnihotri, makes noise amongst the viewers. In the midst of this, there have been reports of fake download links for the film circulating on Whatsapp. Police have issued a warning to those who get suspicious links via social media or WhatsApp from unknown sources, as these could be attempts at cyber fraud. The Kashmir Files is a film about the exodus of Kashmiri Hindus during the Kashmir insurgency in 1990, which was released on March 11.
Cyber criminals send such links to provide links for free access to a popular movie or video. However, users' phones are hacked, and their bank accounts linked to their mobile numbers are emptied.

## Digital commerce transactions increased 30% in 2021 but so did digital frauds, says RBI report

According to the Reserve Bank of India's (RBI) bulletin for March 2022, India's digital commerce transactions expanded 30% in 2021, 760 basis points faster than the global growth rate. The survey says that while the country has been ahead of its peers in digital transactions since 2018, it has also seen a substantial increase in digital fraud.

According to RBI data, Indian lenders reported 4,071 fraud instances between April and September 2021, with a total fraud amount of Rs 36,342 crore.

## FIR registered for the defamatory post against Karnataka Hight Court judge

The South Division cyber crime police have filed an FIR against one person and the administrator and members of the online page 'Mangalore Muslims' for allegedly making derogatory remarks about a High Court judge who is part of a three-judge Bench considering the hijab petition.
Please remember: Once content is posted on social media, it can remain forever. It is very important for one to be mindful of what he/she posts or comments on social media. Posting something offensive might end you up behind the bars.

## WhatsApp has launched a 'Safety in India' hub, which will serve as a resource for online safety in India.

WhatsApp launched a dedicated 'Safety in India' resource hub with a number of safety tips to help people stay safe online.
The resource portal focuses on a number of essential subjects related to online safety, privacy, and security, debunking common myths and spreading awareness about how users may protect themselves from potential cyber scams in today's digitally connected world.

## 2.12 Lakh Cybersecurity Incidents Reported In 2022: Indian Govt

The Indian Computer Emergency Response Team (CERT-In) reported more than 2.12 Lakhs cybersecurity incidents this year (till February 2022). Last year, the CERT-In recorded more than 14.02 lakh cybersecurity-related incidents.

Please remember- Scammers are coming up with newer ways to steal your personal information. In a new method, they are now sending malicious links offering free downloads of new films. Beware of such WhatsApp forwards and you can also easily spot these messages because of the visible mistakes made by the scamsters.




# Online frauds
# ಆನ್‌ಲೈನ್ ಮೋಸಗಳು

<u>Online frauds dupe man with lottery bait</u>

<u>ಆನ್‌ಲೈನ್ ಲಾಟರಿ ಜಾಲದ ಮೋಸಕ್ಕೆ ಒಬ್ಬ ವ್ಯಕ್ತಿ ತುತ್ತಾಗಿದ್ದಾನೆ</u>

<u>Two cyber experts held for misleading Pune police probing cryptocurrency fraud cases</u>

<u>ಕ್ರಿಪ್ಟೋಕರೆನ್ಸಿ ವಂಚನೆ ಪ್ರಕರಣಗಳನ್ನು ತನಿಖೆ ಮಾಡುತ್ತಿದ್ದ ಪೂಣೆ ಪೊಲೀಸರ ದಾರಿ ತಪ್ಪಿಸಿದಕ್ಕೆ ಇಬ್ಬರು ಸೈಬರ್ ತಜ್ಞರನ್ನು ಅರೆಸ್ಟ್ ಮಾಡಲಾಗಿದೆ</u>

<u>Man loses Rs 41 lakh in cyber fraud</u>

<u>ಸೈಬರ್ ವಂಚನೆಯಲ್ಲಿ ಓರ್ವ ವ್ಯಕ್ತಿ 41 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ</u>

<u>Woman gives away KYC details, loses ₹3.25 lakh in cyber fraud</u>

<u>ಕೆವೈಸಿ ವಿವರಗಳನ್ನು ಹಂಚಿಕೊಂಡ ಮಹಿಳೆ, ಸೈಬರ್ ವಂಚನೆಯಲ್ಲಿ ₹3.25 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾಳೆ</u>

<u>Sonam Kapoor’s father-in-law Harish Ahuja's firm duped of over ₹27 crore in cyber fraud</u>

<u>ಸೋನಮ್ ಕಪೂರ್ ಮಾವ ಹರೀಶ್ ಅಹುಜ ಅವರ ವ್ಯಾಪಾರ ಸಂಸ್ಥೆ ಸೈಬರ್ ವಂಚನೆಯಿಂದ ₹27 ಕೋಟಿಯಷ್ಟು ಹಣವನ್ನು ಕಳೆದುಕೊಂಡಿದೆ</u>

<u>64-year-old actress falls for Airtel KYC cyber-fraud, loses Rs 1.48 lakh</u>

<u>64 ವರ್ಷದ ನಟಿಯೊಬ್ಬರು ಏರ್‌ಟೆಲ್ ಕೆವೈಸಿ ಸೈಬರ್ ವಂಚನೆಯಿಂದ, 1.48 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ</u>

<u>Man duped of ₹40L by woman</u>

<u>ಮಹಿಳೆಯಿಂದ ವಂಚಿತನಾದ ವ್ಯಕ್ತಿಯೊಬ್ಬ ₹40 ಲಕ್ಷಗಳನ್ನು ಕಳೆದುಕೊಂಡರು</u>

<u>Elderly man duped of around 1 lakh</u>

<u>ಹಿರಿಯ ನಾಗರಿಕರೊಬ್ಬರು ಸುಮಾರು 1 ಲಕ್ಷವನ್ನು ಕಳೆದುಕೊಂಡರು</u>

<u>Man held for spreading fake news</u>

<u>ತಪ್ಪು ಮಾಹಿತಿ ಹರಡಿದ್ದಕ್ಕಾಗಿ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ</u>

<u>Two arrested for spreading fake news</u>

<u>ತಪ್ಪು ಸುದ್ದಿ ಹರಡಿದ್ದಕ್ಕಾಗಿ ಇಬ್ಬರನ್ನು ಅರೆಸ್ಟ್ ಮಾಡಲಾಯಿತು</u>

<u>Man arrested on job fraud charge</u>

<u>ವಂಚನೆಯ ಪ್ರಕರಣದಲ್ಲಿ ಒಬ್ಬನನ್ನು ಬಂಧಿಸಲಾಯಿತು</u>

<u>Three held for LPG refilling fraud</u>

<u>ಎಲ್‌ಪಿಜಿ ರೀಫಿಲ್ಲಿಂಗ್ ವಂಚನೆ ಪ್ರಕರಣದಲ್ಲಿ ಮೂವರನ್ನು ಬಂಧಿಸಲಾಗಿದೆ</u>

Please remember: If you are a victim of online fraud, contact the authorities during the first two hours of the fraud, also known as the "golden hour". Chances of freezing the accounts, stopping future transactions, and recovering the funds are high during that period. Always be careful while transacting money online, stay cautious and remain cyber alert.



# ಜಾಗೃತಿ ಭಿತ್ತಿ ಚಿತ್ರಗಳು

# Awareness Posters








# ಜಾಗೃತಿ ಭಿತ್ತಿ ಚಿತ್ರಗಳು



# Awareness Posters








# ಸೈಸೆಕ್ ಜಾಗೃತಿ ಭಂಡಾರ

## ಕುಟುಂಬದ ಇಂಟರ್‌ನೆಟ್ ಸುರಕ್ಷತೆ ಸಲಹೆಗಳು

ನಮಗೆ ಇಂಟರ್‌ನೆಟ್ ವರವಾದರು, ಅದರಿಂದ ತೊಂದರೆಗಳನ್ನು ಅನುಭವಿಸುವುದೇ ಹೆಚ್ಚಾಗಿದೆ. ಅದರಿಂದ, ನಮಗಷ್ಟೇ ಅಲ್ಲ, ನಮ್ಮ ಹತ್ತಿರದವರಿಗೂ ತೊಂದರೆಯಾಗಬಹುದು. ನಮ್ಮ-ನಿಮ್ಮ ಕುಟುಂಬ ವರ್ಗದ ಆನ್‌ಲೈನ್ ಬಳಕೆ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಲು, ಇಲ್ಲಿ ಕೆಲವು ಇಂಟರ್‌ನೆಟ್ ಸುರಕ್ಷತೆ ಸಲಹೆಗಳನ್ನು ನೀಡಲಾಗಿದೆ.



## ಮಕ್ಕಳಿಗೆ-

**ಇಂದಿನ ಮಕ್ಕಳು ಇಂಟರ್‌ನೆಟ್ ಹೆಚ್ಚಾಗಿ ಬಳಸುತ್ತಿದ್ದಾರೆ. ಯೂಟ್ಯೂಬ್‌ನಲ್ಲಿ ಮನೋರಂಜನೆಯ ಕಾರ್ಯಕ್ರಮಗಳನ್ನು ನೋಡುವುದು, ಆಟ ಆಡುವುದು ಕೂಡ ಈಗ ಇಂಟರ್‌ನೆಟ್‌ನಲ್ಲೇ ಎನ್ನುವಂತಾಗಿದೆ.**



**ಇಷ್ಟರ ಮಟ್ಟಿಗೆ ಇಂಟರ್‌ನೆಟ್ ಬಳಸುತ್ತಿರುವ ಮಕ್ಕಳಿಗೆ, ಅದರ ಬಳಕೆಯನ್ನು ಸುರಕ್ಷಿತವಾಗಿಸುವುದು ಹೇಗೆ ಎಂದು ಕಲಿಸಲು, ಪೋಷಕರು ಕಾಯುತ್ತಾ ಕೂರಬಾರದು. ನಿಮ್ಮ ಮಕ್ಕಳು ಇಂಟರ್‌ನೆಟ್ ಬಳಸುತ್ತಿದ್ದರೇ, ಅವರು ಆನ್‌ಲೈನ್ ಸುರಕ್ಷತೆಯ ಬಗ್ಗೆ ತಿಳುವಳಿಕೆ ಹೊಂದಿರುವುದು ಮುಖ್ಯ.**

ಇಂಟರ್‌ನೆಟ್‌ನ ಅಪಾಯಗಳ ಬಗ್ಗೆ ಮಕ್ಕಳಿಗೆ ತಿಳಿಸಬೇಕು
ಇಂಟರ್‌ನೆಟ್‌ನಲ್ಲಿ ಸಿಗುವ ಎಲ್ಲವನ್ನು ಬಳಸದೇ, ತಮಗೆ ಅವಶ್ಯಕವಾದ ಮಾಹಿತಿಯನ್ನು ಮಾತ್ರ ನೋಡಿ ಕಲಿತುಕೊಳ್ಳಬೇಕು ಎಂದು ಅವರಿಗೆ ಹೇಳಬೇಕು. ಜೊತೆಗೆ, ಯಾವುದೇ ವೆಬ್‌ಪೇಜ್‌ನಲ್ಲಿ ಕಾಣಿಸುವ ಗೊತ್ತಾಗದ ವಿಷಯಗಳ ಮೇಲೆ ಹೇಳದೇ ಕೇಳದೇ ಕ್ಲಿಕ್ ಮಾಡಬಾರದು ಎಂದು ತಿಳಿಹೇಳಬೇಕು.

****

### ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ಸುರಕ್ಷಿತವಾಗಿಡಿ

ನಿಮ್ಮ ಸೂಕ್ಷ್ಮ ಅಕೌಂಟ್ ವಿವರಗಳನ್ನು ಮಕ್ಕಳ ಕಲಿಕೆ ಮತ್ತು ಮನೋರಂಜನೆ ವೇದಿಕೆಯಿಂದ ದೂರ ಇಡಿ.

### ಮಕ್ಕಳು ಕಲಿಕೆಗೆ ಇಂಟರ್‌ನೆಟ್ ಉಪಯೋಗಿಸುವ ಡಿವೈಸ್ ಮೇಲೆ ನಿಮ್ಮ ಕಣ್ಣಿಟ್ಟಿರಬೇಕು

ಅವರು ಇಂಟರ್‌ನೆಟ್ ಹುಡುಕಾಟಕ್ಕೆ ಬಳಸುವ ಕಂಪ್ಯೂಟರ್ ಎಲ್ಲರು ಓಡಾಡುವ ಜಾಗದಲ್ಲಿ ಇದ್ದರೆ ಒಳ್ಳೆಯದು. ಮಕ್ಕಳು ಫೋನ್ ಅಥವಾ ಟ್ಯಾಬ್ಲೆಟ್ ಅನ್ನು ಎಷ್ಟು ಸಮಯದವರೆಗೆ ಬಳಸುತ್ತಿದ್ದಾರೆ ಎಂದು ಕೂಡ ಟ್ರ್ಯಾಕ್ ಮಾಡಬೇಕು. ಮಕ್ಕಳು ಸರಿಯಾದ ಆನ್‌ಲೈನ್ ಅಭ್ಯಾಸವನ್ನು ಕಲಿಯಲು, ನೀವು ಅವರಿಗೆ ಸಲಹೆ-ಸೂಚನೆಗಳನ್ನು ನೀಡಿ, ಅವರ ಜೊತೆ ಬ್ರೌಸಿಂಗ್ ಮಾಡುತ್ತಾ ಸಮಯ ಕಳೆದರೆ ಇನ್ನೂ ಉತ್ತಮ.

**ನಿಮ್ಮ ಮಕ್ಕಳ ಕಲಿಕೆಗೆ ಸಹಾಯವಾಗಲು, ಅವರದೇ ಆದ ಸುರಕ್ಷಿತ ಯೂಸರ್‌ನೇಮ್ ಮತ್ತು ಪಾಸ್‌ವರ್ಡ್ ಮಾಡಿಕೊಟ್ಟು, ಕೋರ್ಸ್, ಲೆಕ್ಚರ್‌ಗಳನ್ನು ಅಟೆಂಡ್ ಮಾಡಲು ಮತ್ತು ಅಸೈನ್ಮೆಂಟ್‌ಗಳನ್ನು ಮಾಡಲು ಅನುವು ಮಾಡಿಕೊಡುವುದೇ ಲೇಸು.**



# INTERNET SAFETY TIPS FOR FAMILIES

The internet is a boon, but also a bane in many ways.
It also can harm us as well as the people we love.
Here are a few Internet Safety Tips
to help ensure your whole family stays safer online.



## For Kids

Kids today are active users of the Internet, whether it be watching YouTube for entertainment, or playing games.



**Parents should never feel it is too early to teach kids about internet safety. If your kid is using internet, they should be aware of online safety tips.**

**Educate children about the dangers of the internet**
Teach children about questionable online activities and encourage them to seek assistance if something seems out of the ordinary.

**Guard your personal information**
Avoid reusing your accounts for your child's studies or entertainment.

**Create a safe online learning space**
Keep the computer in a common area where you can view and monitor your child while using the same. Keep track of how much time your child is spending on phone or tablet. Spend shared time online with your children to teach them proper online behavior.



It is always better to have a separate and secure username and password for your child to log into courses, lectures, and assignments.



# ಉಪಯುಕ್ತ ಲಿಂಕ್‌ಗಳು
# Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- **ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in**
- **ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in**
- **ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು**

Some useful links for staying cyber aware and cyber safe -

- To lodge complaint against a cyber-crime - cybercrime.gov.in
- To identify fake information: https://factcheck.ksp.gov.in
- Bangalorians can call 112 for registering complaints related to online frauds.

# ಸೈಸೆಕ್ ಬಗ್ಗೆ
# About CySecK

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-Tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.